## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್.

ಸಿಸಿ ನಂ.185/2018

ಫಿರ್ಯಾದುದಾರರು : ಸರಕಾರ (ಹಾನಗಲ್ ಪೊಲೀಸರಿಂದ)

ವಿರುದ್ಧ

ಆರೋಪಿ : ದೇವಾರಾಮ್ ಮತ್ತು ಇತರರು

ಶ್ರೀಮತಿ ಅನಿತ, ಬಿ.ಎ.(ಲಾ), ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಹಾನಗಲ್ ಆದ ನಾನು ಈ ಕೆಳಗೆ ಕಾಣಿಸಿರುವ:

1. ದೇವಾರಾಮ್, ತಂದೆ ಪುಕ್ಕಾರಾಮ್, 39 ವರ್ಷ,
   ವಾಸಃ ನಂ.559, ಭುವನೇಶ್ವರಿ ನಗರ,
   ಬನಶಂಕರಿ 3 ನೇ ಹಂತ, ಬೆಂಗಳೂರು ನಗರ

2. ಮೊಹಮ್ಮದ್ ರಫೀಕ್ ಯಾನೆ ಮಾಮ,
   ಬಿನ್ ಅಬ್ದುಲ್ ಖಾದರ್, 42 ವರ್ಷ,
   ವಾಸಃ ನಂ.257, ಅರೇಬಿಕ್ ಕಾಲೇಜ್ ಪೋಸ್ಟ್,
   1 ನೇ ಕ್ರಾಸ್, ಎ.ಎಂ.ಸಿ.ರೋಡ್, ಕುಶಾಲನಗರ,
   ಬೆಂಗಳೂರು ನಗರ – 45

3. ಅಬ್ದುಲ್ ಅಜೀಜ್ ಯಾನೆ ಅಜೀಜ್,
   ಬಿನ್ ಮುಕ್ತಮಸಾಬ್, 30 ವರ್ಷ,
   ಹಳೇ ಹುಬ್ಬಳ್ಳಿ, ಸದರಸೊಪಾ, ಕೋಳೀಘಾರ್,
   ಪ್ಲಾಟ್, ಹುಬ್ಬಳ್ಳಿ

4. ಸಾದೀಕ್, ತಂದೆ ದಾವಲ್ ಸಾಬ್, 30 ವರ್ಷ,
   ವಾಸಃ ಇಸ್ಲಾಂಪುರ, ಮುಬಾರಕ್ ಚಾಲ್,
   ಹಳೇ ಹುಬ್ಬಳ್ಳಿ, ಹಾಲಿ ವಾಸಃ ಹೂಸುರು ಹಳ್ಳಿ
   ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ

5. ಜುಬೇರ್

   (**2** ರಿಂದ **5** ನೇ ಆರೋಪಿತರ ವಿರುದ್ಧ ಪ್ರಕರಣ ಪ್ರತ್ಯೇಕಿಸಲಾಗಿದೆ)

### ದೋಷಾರೋಪಣೆ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ದಿನಾಂಕ 21.10.2016 ರಂದು ರಾತ್ರಿ 9.30 ಘಂಟೆಯಿಂದ ದಿನಾಂಕ 22.10.2016 ರ ಬೆಳಗಿನ ಜಾವ 4.30 ಗಂಟೆಯ ನಡುವಿನ ಅವಧಿಯಲ್ಲಿ 1 ನೇ

ಆರೋಪಿಯಾದ ನೀವು 2 ರಿಂದ 3 ನೇ ಆರೋಪಿತರೊಂದಿಗೆ ಹಾನಗಲ್ ಪೋಲೀಸ್ ಠಾಣಾ ವ್ಯಾಪ್ತಿಯ ಹಾನಗಲ್ ಶಹರದ ಎಫ್.ಟಿ.ನಿಂಗೋಜಿ ಕಾಂಪ್ಲೆಕ್ಸ್ ನಲ್ಲಿರುವ ಆಶೀರ್ವಾದ್ ಜ್ಯುವೆಲ್ಲರ್ಸ್ ವರ್ಕ್ಸ್ ಅಂಗಡಿಯ ಗ್ರಿಲ್ ಗೇಟ್‌ನ ಬೀಗವನ್ನು ಮತ್ತು ಶಟರ್ಸ್ ಬೀಗವನ್ನು ಕಬ್ಬಿಣದ ರಾಡು, ಬ್ಯಾಟರಿ, ಸ್ಕ್ರೂ ಡ್ರೈವರ್, ಲಾಕರ್ ಓಪನ್‌ನ ಸಹಾಯದಿಂದ ಬೀಗವನ್ನು ಮುರಿದು ಅಂಗಡಿಯ ಒಳಗೆ ಹೋಗಿ ಕನ್ನ ಹಾಕಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 457 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗು ಸಂದರ್ಭಗಳಂದು 1 ನೇ ಆರೋಪಿಯಾದ ನೀವು 2 ರಿಂದ 5 ಆರೋಪಿತರೊಂದಿಗೆ ಮೇಲೆ ಹೇಳಿದ ಅಂಗಡಿಯ ಬೀಗವನ್ನು ಮುರಿದು ಅಂಗಡಿಯ ಒಳಗೆ ಹೋಗಿ ಕನ್ನ ಹಾಕಿ 1.220 ಗ್ರಾಂ ತೂಕದ ಬೆಳ್ಳಿಯ ಕಾಲುಚೈನುಗಳು, 600 ಗ್ರಾಂ ತೂಕದ ಬೆಳ್ಳಿಯ ದೀಪದ ತಟ್ಟೆ, 580 ಗ್ರಾಂ ತೂಕದ ಬೆಳ್ಳಿಯ ಚೆಂಬು, 430 ಗ್ರಾಂ ತೂಕದ ಕುಂಕುಮ ಭರಣಿ, 350 ಗ್ರಾಂ ತೂಕದ ಬೆಳ್ಳಿಯ ತಟ್ಟೆ, 430 ಗ್ರಾಂ ತೂಕದ ಉಡುದಾರ ಸೇರಿ ಬೆರಳಿನ ಉಂಗುರ 4.30 ಗ್ರಾಂ ತೂಕದ ದೇವರ ಮುಖ, 300 ಗ್ರಾಂ ತೂಕದ ದೇವರ ಮೂರ್ತಿ, 250 ಗ್ರಾಂ ತೂಕದ ಬ್ರಾಸ್ ಲೆಟ್, 240 ಗ್ರಾಂ ತೂಕದ ಬೆಳ್ಳಿಯ ಬಟ್ಟಲು, ಬೆಳ್ಳಿಯ ಕಾಲು ಗೆಜ್ಜೆಗಳನ್ನು ಕಳ್ಳತನ ಮಾಡಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 380 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

Sd/-
(ಅನಿತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಹಾನಗಲ್.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್.

ಸಿಸಿ ನಂ.185/2018

ಆರೋಪಿ ನಂ.1

| | | |
|---|---|---|
| ಆಪಾದಿತನ ಹೆಸರು | : | ದೇವಾರಾಮ್, ತಂದೆ , ವರ್ಷ, |
| ತಂದೆಯ ಹೆಸರು | : | ಪುಕ್ಕಾರಾಮ್ |
| ವಯಸ್ಸು | : | 39 ವರ್ಷ, |
| ಉದ್ಯೋಗ | : | - |
| ವಾಸಸ್ಥಳ | : | ವಾಸಃ ನಂ.559, ಭುವನೇಶ್ವರಿ ನಗರ, ಬನಶಂಕರಿ 3 ನೇ ಹಂತ, ಬೆಂಗಳೂರು ನಗರ |

ದಂಡ ಪ್ರಕ್ರಿಯಾ ಸಂಹಿತೆಯ ಕಲಂ **240** ರ ಅಡಿ ಆರೋಪಿಯ ಹೇಳಿಕೆ

ಪ್ರಶ್ನೆ1 : ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ ತಿಳಿದಿದೆ

ಪ್ರಶ್ನೆ2 : ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉತ್ತರಃ ತಪ್ಪು ಮಾಡಿಲ್ಲ ವಿಚಾರಣೆಯಾಬೇಕು

ಮೇಲಾಣಿಸಿದ ಹೇಳಿಕೆಯನ್ನು ದಿನಾಂಕಃ- 29.08.2023 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು, ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

Sd/-
(ಅನಿತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ಹಾನಗಲ್.